KARNATAKA NEERVARI NIGAM LTD.
No: ..............
30 AUG 2000
BANGALORE-560 001

(12)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಲಪ್ರಭಾ ಯೋಜನೆಯ ಪೂರಕ ಯೋಜನೆಯಾದ "ಕಳಸಾ" ನಾಲಾ ತಿರುವು ಯೋಜನೆಯಿಂದ ಹೆಚ್ಚುವರಿ ನೀರನ್ನು ಮಲಪ್ರಭಾ ನದಿಗೆ ಪೂರೈಸುವ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡುವ ಬಗ್ಗೆ.

---

**ಓದಲಾಗಿದೆ:**

(1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂ:ಎಂಡಿ:ಕೆಎನ್‌ಎನ್‌ಎಲ್:ಟಿಇಸಿಹೆಚ್:ಕೆಎಲ್ ಅಂಡ್ ಬಿಎನ್:2000-01:455ಎ, ದಿನಾಂಕ:27:29-5-2000.

(2) ಮುಖ್ಯ ಇಂಜಿನಿಯರ್, ನೀರಾವರಿ (ಉತ್ತರ), ಬೆಳಗಾಂ ರವರ ಪತ್ರ ಸಂ:ಸಿಇಎನ್:ಪಿಎಲ್‌ಸಿ:ಟಿಎಸಿ:ಎಂಐಪಿಸಿ:ಹೆಚ್‌ಎನ್‌ಡಿ:2000-2001, ದಿನಾಂಕ:9-6-2000

(3) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಪತ್ರ ಸಂ:ಅಪಜೀ 266 ಇಸಿಓ 2000, ದಿನಾಂಕ:19-7-2000.

**ಪ್ರಸ್ತಾವನೆ:**

ಬೆಳಗಾಂ ಜಿಲ್ಲೆಯ, ಸವದತ್ತಿ ತಾಲ್ಲೂಕಿನಲ್ಲಿರುವ ಮಲಪ್ರಭಾ ನೀರಾವರಿ ಯೋಜನೆಯಿಂದ ಬೆಳಗಾಂ, ಧಾರವಾಡ ಮತ್ತು ಬಾಗಲಕೋಟೆ ಜಿಲ್ಲೆಗಳ ಸುಮಾರು 2,20,028 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸಲು ಉದ್ದೇಶಿಸಲಾಗಿದೆ, ಮತ್ತು ಪ್ರಸ್ತುತ 1,78,254 ಹೆಕ್ಟೇರ್ ಪ್ರದೇಶಗಳಿಗೆ ಈಗ ನೀರಾವರಿ ಒದಗಿಸಲಾಗುತ್ತಿದೆ. ಮಲಪ್ರಭಾ ಯೋಜನೆಯ ಜಲಾನಯನ ಪ್ರದೇಶದಲ್ಲಿ ಮಳೆಯ ಏರುಪೇರಿನಿಂದಾಗಿ ಈ ಜಲಾಶಯಕ್ಕೆ ಉದ್ದೇಶಿತ ಶೇ.75 ರಷ್ಟು ನೀರಿನ ಹರಿವು 1972 ರಿಂದಲೂ ಪಡೆಯಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಹಿಂಗಾರು ಮತ್ತು ಮುಂಗಾರು ಬೆಳೆಗಳಿಗೆ ಸಂಪೂರ್ಣವಾಗಿ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಮಲಪ್ರಭಾ ಜಲಾಶಯಕ್ಕೆ, ಪಶ್ಚಿಮಾಭಿಮುಖವಾಗಿ, ಖಾನಾಪುರ ತಾಲ್ಲೂಕಿನಲ್ಲಿ ಹರಿಯುವ ಮಹಾದಾಯಿ ನದಿಯಿಂದ ಮತ್ತು ಕಳಸಾ, ಹಲ್ತಾರ ಮತ್ತು ಪೋಟ್ಲಿ ನಾಲಾಗಳಿಂದ ಸುಮಾರು 9 ಟಿಎಂಸಿ. ಹೆಚ್ಚುವರಿ ನೀರನ್ನು ಮಲಪ್ರಭಾ ನದಿಗೆ ತಿರುಗಿಸುವ ಆಗತ್ಯತೆಯು ಕಂಡುಬಂದಿದೆ.

2. ಈ ಕೊರತೆಯನ್ನು ನೀಗಿಸಲು "ಕಳಸಾ" ನಾಲಾ ಯೋಜನೆಯನ್ನು ತಯಾರಿಸಲಾಗಿದೆ. ಈ ಯೋಜನೆಯಿಂದ ಮಲಪ್ರಭಾ ನದಿಗೆ 3.56 ಟಿಎಂಸಿ. ನೀರನ್ನು ತಿರುಗಿಸಲು ಪ್ರಸ್ತಾಪಿಸಲಾಗಿದೆ, ಮತ್ತು ಇದರ ಅಂದಾಜು ವೆಚ್ಚವು ರೂ.44.78 ಕೋಟಿಗಳಾಗಿರುತ್ತದೆ.

3. ದಿನಾಂಕ:19-7-2000 ರಂದು ನಡೆದ ನೀರಾವರಿ ಇಲಾಖೆಯ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಮತ್ತು ಭಾರೀ ನೀರಾವರಿ ನಿಯಂತ್ರಣ ಮಂಡಳಿಯ ಸಭೆಗಳಲ್ಲಿ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಆಡಳಿತಾತ್ಮಕ ಒಪ್ಪಿಗೆಯನ್ನು ನೀಡಲು ಶಿಫಾರಸ್ಸು ಮಾಡಲಾಗಿದೆ. ಆದರಂತೆ, "ಕಳಸಾ" ಅಣೆಕಟ್ಟಿನ ಕಾಮಗಾರಿಯನ್ನು ಹಂತ-1ರ ಅಡಿಯಲ್ಲಿ ಕೂಡಲೇ ಕೈಗೊಳ್ಳಬೇಕೆಂದು ಮತ್ತು ಹಲ್ತಾರ ಅಣೆಕಟ್ಟೆಯಿಂದ ದೊರಕಬಹುದಾದ 0.56 ಟಿಎಂಸಿ. ನೀರಿನ ಕಾಮಗಾರಿಯನ್ನು ಹಂತ-2 ರಲ್ಲಿ ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಲಾಗಿದೆ.

-2-

3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
5) ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು
7) ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಅಂಚೆ ಪೆಟ್ಟಿಗೆ ನಂ.5303, ನಂ.17, ಇನ್ಫೆಂಟ್ರಿ ರಸ್ತೆ, ಬೆಂಗಳೂರು-1.
8) ಆರಕ್ಷಕ ಮಹಾ ನಿರೀಕ್ಷಕರು, ನೀರಾವರಿ ಇಲಾಖೆ (ಜಾಗೃತ ದಳ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
9) ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ(ಉತ್ತರ), ಬೆಳಗಾಂ
10) ಸರ್ಕಾರದ ಉಪ ಕಾರ್ಯದರ್ಶಿ(ಸೇವೆಗಳು), ನೀರಾವರಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
11) ಎಲ್ಲಾ ಅಧೀನ ಕಾರ್ಯದರ್ಶಿಗಳು, ನೀರಾವರಿ ಇಲಾಖೆ
12) ವಿಶೇಷಾಧಿಕಾರಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ) ಮತ್ತು ಪದನಿಮಿತ್ತ, ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
13) ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು
14) ಶಾಖಾ ರಕ್ಷಕ ಕಡತ : ಆದೇಶ ಕಡತ : ಬಿಡಿ ಪ್ರತಿಗಳು.

ಎಲ್.22.